ಓ.ಎಸ್. ನಂಃ **17/2022**
ಡಿ-<u>ಡಬ್ಲ್ಯೂಃ **1**</u>

ದಿನಾಂಕಃ **26-03-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿಯ ಪರ ಶ್ರೀ ಎಮ್. ಎಮ್. ಈ  ವಕೀಲರಿಂದಃ</u>

1. ಬುಡ್ಡಪ್ಪ ನನ್ನ ತಾತ ಆಗಿರುತ್ತಾರೆ. ಬುಡ್ಡಪ್ಪನವರಿಗೆ ಇಬ್ಬರು ಹೆಂಡತಿಯರು ಇದ್ದರು. ಅವರ ಮೊದಲನೆ ಹೆಂಡತಿಯ ಹೆಸರು ನರಸಮ್ಮ ಎಂದು ಇತ್ತು. ಅವರ ಎರಡನೆಯ ಹೆಂಡತಿಯ ಹೆಸರು ಲಕ್ಷ್ಮಮ್ಮ ಎಂದು ಇತ್ತು. ಸದರಿ ನರಸಮ್ಮ ಇವರಿಗೆ ಬಿಚ್ಚಮ್ಮ ಎಂಬ ಒಬ್ಬಳು ಮಗಳು ಮಾತ್ರ ಇದ್ದರು ಎಂದರೆ ಸರಿ. ಸದರಿ ಬಿಚ್ಚಮ್ಮ ಇವರಿಗೆ 6 ಜನ ಮಕ್ಕಳು ಇದ್ದು, ಆ ಪೈಕಿ ಆನಂದಮ್ಮ ಎಂಬುವವರು ಮರಣ ಹೊಂದಿದ್ದಾರೆ ಎಂದರೆ ಸರಿ. ವಾದಿ ಹಾಗೂ 2 ರಿಂದ 5 ನೇ ಪ್ರತಿವಾದಿಯರು ಬಿಚ್ಚಮ್ಮರವರ ಉಳಿದ 5 ಜನ ಮಕ್ಕಳಾಗಿರುತ್ತಾರೆ ಎಂದರೆ ಸರಿ.  ಬುಡ್ಡಪ್ಪರವರ ಎರಡನೆ ಹೆಂಡತಿ ಲಕ್ಷ್ಮಮ್ಮ ಇವರಿಗೆ ವೆಂಕಟಮ್ಮ ಎಂಬ ಒಬ್ಬಳೇ ಮಗಳು ಇದ್ದರು ಎಂದರೆ ಸರಿ.

2. ಬಿಚ್ಚಮ್ಮ ಇವರು ಸನಃ 2005 ರಲ್ಲಿ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬುಡ್ಡಪ್ಪ ಇವರಿಗೆ ಬಿಚ್ಚಮ್ಮ ಹಾಗೂ ವೆಂಕಟಮ್ಮ ಎಂಬ ಇಬ್ಬರು ಮಕ್ಕಳು ಮಾತ್ರ ಇದ್ದರು ಎಂದರೆ ಸರಿ.  ಬುಡ್ಡಪ್ಪ ಇವರಿಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ. ಗಂಡು ಮಕ್ಕಳು ಇಲ್ಲದ ಕಾರಣ ಬಿಚ್ಚಮ್ಮರವರ ಗಂಡ ರಾಮುಲು ಇವರನ್ನು ಬುಡ್ಡಪ್ಪ ಮನೆ ಅಳಿಯನನ್ನಾಗಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಾವಾ ಜಮೀನುಗಳು ಬುಡ್ಡಪ್ಪ ರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ತನ್ನ ಜೀವಿತಾವಧಿಯಲ್ಲಿ ಬುಡ್ಡಪ್ಪ ದಾವಾ ಜಮೀನುಗಳು ಮಾಲೀಕ ಹಾಗೂ ಕಬ್ಜೆದಾರ ಆಗಿದ್ದರು ಎಂದರೆ ಸರಿ.  ಬುಡ್ಡಪ್ಪ ಈಗ 30 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ.  ಬುಡ್ಡಪ್ಪ ಮರಣ ಹೊಂದುವ ಪೂರ್ವದಲ್ಲಿಯೇ ಬಿಚ್ಚಮ್ಮರವರು ಮರಣ ಹೊಂದಿದ್ದರು. ನರಸಮ್ಮ ತೀರಿಕೊಂಡ ನಂತರ ಬುಡ್ಡಪ್ಪರವರು ಲಕ್ಷ್ಮಮ್ಮರವರನ್ನು ಮದುವೆಯಾಗಿದ್ದರು.

**(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.)**

<u>ಮರು ವಿಚಾರಣೆ ಃ</u> ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ